ಪುಣೆಯ ಏಕೈಕ ಕನ್ನಡ ಮಾಸಪತ್ರಿಕೆ

# ಕಂಪು

September 2024



## ಶ್ರಾವಣಾ ಬಂತು ನಾಡಿಗೆ

# ಒಳಗೇನಿದೆ ?



ಕಂಪು – ಸಂಚಿಕೆ 5: ಸೆಪ್ಟೆಂಬರ್ 2024


ಸಂಪಾದಕರ ಲೇಖನಿಯಿಂದ 2

ಅಗ್ರ ಲೇಖನ

ನಮ್ಮ ಹಬ್ಬಗಳು 3

ನಾನು ಮತ್ತು ನನ್ನ ಹಬ್ಬ 6

ನಮ್ಮಲ್ಲಿನ ಸುದ್ದಿ

ಬಿಲ್ಲವ ಸಂಘ, ಪಿಂಪ್ರಿ, ಚಿಂಚವಾಡ – ವಾರ್ಷಿಕ ಸಭೆ 9

ಹನಿಗವನ 5

ಕಾವ್ಯ ಮಲ್ಲಿಗೆ

ನಾಗರ ಪಂಚಮಿ 8

ಜಗದ ಸಂತೆ 14

ತಿಂಗಳ ವ್ಯಕ್ತಿ

ಶ್ರೀಮತಿ ಅನ್ನಪೂರ್ಣ ಸಕ್ರೋಜಿ 7

ಚೆಂದದ ಚಿತ್ತಾರ 10

ಮೊಗ್ಗೆಯ ಕಂಪು

ಜಾಹ್ನವಿ ಮಾನಾ 11

ಹರಟೆಯ ಕಟ್ಟೆ

ಅಪ್ಪ ಮತ್ತು ಟ್ರಿಣ್.. ಟ್ರಿಣ್.... ಸೈಕಲ್ 12

ಮುಂದಿನ ಸಂಚಿಕೆಯಲ್ಲಿ 15



ವಿನ್ಯಾಸಗಾರ, ಪ್ರಕಾಶಕ
ಹಾಗು
ಸಂಪಾದಕ:

**ಮನೋಜಕುಮಾರ ಅಣ್ಣಿಗೇರಿ**

e mail:

editor@kampu.org

https://kampu.org

facebook.com/profile.php?id=61562070031486

https://www.youtube.com/@kannada-pune

https://chat.whatspp.com/JjiKncQL11dQ6VHxAylo



# ಸಂಪಾದಕರ ಲೇಖನಿಯಿಂದ............

ಪ್ರಿಯ ಕನ್ನಡಿಗರೇ,

ಕಂಪು ಈಗ ಪತ್ರಿಕೆಯಿಂದ ಬೆಳೆದು ಕನ್ನಡ ಸಾಹಿತ್ಯ ಮತ್ತು ಸಕಾರಾತ್ಮಕ ಸುದ್ದಿಯ ಸಮಗ್ರ ಮಾಧ್ಯಮವಾಗಿ ರೂಪಗೊಂಡಿದೆ. ಕಂಪುವಿನ WhatsApp group, YouTube Channel ಮತ್ತು Facebook page ಗಳ ನಂತರ ಈಗ ಕಂಪು Website ಮತ್ತು ಕಂಪು Android App ಕೂಡ ಹೊರತರಲಾಗಿದೆ.

ಈ ಸಂದರ್ಭದಲ್ಲಿ ಐದನೆಯ ಸಂಚಿಕೆ ತರಲು ಅತೀವ್ರ ಅಭಿಮಾನವೆನಿಸುತ್ತಿದೆ. ಈ ಎಲ್ಲ ಮಾಧ್ಯಮಗಳಲ್ಲಿ ಭಾಗವಹಿಸಿ ಕಂಪು ಸಮೃದ್ಧಗೊಳಿಸಲು ಬಳಗದ ಸದಸ್ಯರೆಲ್ಲರಲ್ಲಿ ಮನವಿ.

ಪುಣೆಯ ಕನ್ನಡ ಬಳಗದಲ್ಲಿ ಅನೇಕ ಸಾಂಸ್ಕೃತಿಕ ಕಾರ್ಯಕ್ರಮಗಳಾಗುತ್ತಿರುವದು ಸಂತಸದ ವಿಷಯ. ಅದೇ ರೀತಿ ಪುಣೆಯ ತುಳುನಾಡಿನ ಸಂಸ್ಥೆಗಳೂ ಅನೇಕ ಕಾರ್ಯಕ್ರಮ ಹಮ್ಮಿಕೊಳ್ಳುತ್ತಿವೆ. ಇದರಿಂದ ಒಟ್ಟಾಗಿ ಕರ್ನಾಟಕದ ಸಂಸ್ಕೃತಿ ಇಲ್ಲಿ ಬೆಳೆಯುತ್ತಿದೆ, ಬೆಳಗುತ್ತಿದೆ. ಇವೆಲ್ಲದರ ಸಮಾಚಾರ ನಮಗೆ ಸಿಗಲಿ, ನಾವೆಲ್ಲ ಅದನ್ನು ಹಂಚಿಕೊಳ್ಳೋಣ.

ಅಗಷ್ಟ ಸಂಚಿಕೆಯಿಂದ ಪ್ರತಿ ಬಾರಿ ಒಂದು ಆಯ್ದ ವಿಷಯಕ್ಕೆ ಪ್ರಾಮುಖ್ಯತೆ ಕೊಟ್ಟಿದೆವು. ಭಾರತ ಸ್ವಾತಂತ್ರ್ಯಕ್ಕೆ ಕನ್ನಡಿಗರ ಕೊಡುಗೆಯನ್ನು ಬಿಂಬಿಸಿ ಹೋದ ಸಂಚಿಕೆ ಬಂದರೆ, ಹಬ್ಬಗಳ ಋತುವಿನಲ್ಲಿ ಬಂದ ಈ ಸಂಚಿಕೆಯಲ್ಲಿ ಅನುಭವ, ಕವನ, ಚಿತ್ರಗಳ ಮುಖಾಂತರ ಹಬ್ಬ ಆಚರಿಸೋಣ.

ಈ ಸಂಚಿಕೆಯಲ್ಲಿ ಹಬ್ಬಗಳ ಬಗ್ಗೆ ವಿಶೇಷ ಲೇಖನ ಬರೆದ ರಶ್ಮಿಯವರಿಗೆ ಧನ್ಯವಾದಗಳು. 'ಚೆಂದದ ಚಿತ್ತಾರ' ಅಂಕಣದಡಿ ಈ ಬಾರಿ ವೈವಿಧ್ಯಮಯ ಕಲೆಗಳ ಸಂಗ್ರಹ ತಂದಿದ್ದೇವೆ. ತಮ್ಮ ಕೃತಿಗಳನ್ನು ನಮಗೆ ಕಳಿಸಿದ್ದಕ್ಕೆ ಜ್ಯೋತಿ ದೇಸಾಯಿಯವರಿಗೆ ಧನ್ಯವಾದಗಳು.

ನಾವೀಗ ಕಂಪು Website ಬಿಡುಗಡೆ ಮಾಡಿದ್ದೇವೆ. https://kampu.org/ ಗೆ ಭೇಟಿ ನೀಡಿ ನಮ್ಮೆಲ್ಲಾ ಪತ್ರಿಕೆಗಳನ್ನು ಓದಬಹುದು. ಪುಣೆ ಸಂಭಂದಿತ ಮಾಹಿತಿಗಳನ್ನೂ ಕೂಡ ಈ ಜಾಲತಾಣದಲ್ಲಿ ದೊರಕಿಸುವ ಬಯಕೆ. ಅದಕ್ಕೆ ಪುಣೆಯಲ್ಲಿನ ಕನ್ನಡ ಸಂಘ – ಸಂಸ್ಥೆಗಳ ನೆರವು ಮತ್ತು ಕನ್ನಡ ಬಾಂಧವರ ಸಹಾಯ ಅವಶ್ಯಕ. ಈ ಜಾಲತಾಣ ಸ್ಥಾನವನ್ನು ಸಮೃದ್ಧಗೊಳಿಸಲು ಎಲ್ಲರೂ ಕೈಗೂಡಿಸುವಿರೆಂದು ನಂಬಿರುವೆ.

ಪತ್ರಿಕೆ ತರಲು ಸಹಾಯ ಮಾಡಲು ಕೆಲವರು ಸ್ವಯಂ ಸ್ಫೂರ್ತಿಯಿಂದ ಮುಂದೆ ಬಂದಿದ್ದಾರೆ. ಇದರಲ್ಲಿ ಭಾಗಿಯಾಗಲು ತಾವು ನನ್ನನ್ನು ಸಂಪರ್ಕಿಸಬಹುದು.

ಇನ್ನೂ ಕೆಲದಿನಗಳಲ್ಲಿ ಗಣೇಶ ಬರಲಿದ್ದಾನೆ. ಗಣನಾಯಕ, ಎಲ್ಲ ವಿಘ್ನಗಳನ್ನು ಪರಿಹರಿಸಿ ಎಲ್ಲರಲ್ಲಿಯೂ ಸುಖ, ಶಾಂತಿ ನೆಮ್ಮದಿ ತರಲಿ. ಕಂಪು ಹರಡಲಿ, ಕನ್ನಡ ಬೆಳಗಲಿ.

ನಿಮ್ಮಲ್ಲಿಯ ಕನ್ನಡಿಗ,

- ಮನೋಜಕುಮಾರ ಅಣ್ಣಿಗೇರಿ



# ನಮ್ಮ ಹಬ್ಬಗಳು



- ರಶ್ಮಿ ಕುಲಕರ್ಣಿ

ಹಬ್ಬ ಎಂಬ ಎರಡಕ್ಷರದ ಪದದ ಹಿಂದೆ ಎಷ್ಟು ವಿಶೇಷತೆ ವೈಶಿಷ್ಟತೆ , ನೆನಪುಗಳು, ಆಚರಣೆಗಳು, ಅನುಭವಗಳು ಕಲಿಕೆಗಳು, ಹೀಗೆ ನೂರಾರು ಸ್ಮರಣೆಗಳ ಸರಮಾಲೆ ಕಣ್ಣ ಮುಂದೆ ಬರುತ್ತದೆ ಅಲ್ಲವೇ? ಪ್ರತಿ ತಿಂಗಳು ಅದರದೇ ವಿಶೇಷತೆಯಿಂದ ಕೂಡಿದ್ದು ಹಬ್ಬಗಳೆಂಬ ಆಚರಣೆಗಳನ್ನು ಹೊತ್ತು ತರುತ್ತವೆ. ಅದರಲ್ಲೂ ಶ್ರಾವಣ ಬಂದರಂತೂ ಹಬ್ಬಗಳ ಸರಮಾಲೆಯೇ ಬರುತ್ತದೆ.

ಹಬ್ಬ ಹರಿ ದಿನಗಳೆಂದಾಗ ಅರಳದ ವದನಗಳಿಲ್ಲ, ಸಂಭ್ರಮಿಸದ ಮನಸುಗಳಿಲ್ಲ ಎಲ್ಲ ವಯಸ್ಸಿನವರನ್ನು ಒಂದೆಡೆ ಸೇರಿಸಿ ಸಂಸ್ಕೃತಿಯ ಪರಂಪರೆಯ, ಸೊಗಡನ್ನು ಹಂಚಿಕೊಳ್ಳುವ ಅಪೂರ್ವ ಅವಕಾಶವೆಂದರೆ ಹಬ್ಬಗಳು. ಕೆಲ ಹಬ್ಬಗಳು ಆಧುನಿಕತೆಯ ಸೋಗಿನಲ್ಲಿ ಅಬ್ಬರ ಮತ್ತು ಸಿನಿಮೀಯವಾಗುತ್ತಾ ಇದ್ದರೆ, ಇನ್ನೊಂದೆಡೆ ಹಳ್ಳಿಯ ಸೊಗಡು ಬೀರುವ ನಮ್ಮ ಬಾಲ್ಯದ ಕೆಲ ಹಬ್ಬಗಳು ಕಾಣೆಯಾಗುತ್ತಿವೆ. ಅಂತಹ ಕೆಲ ಹಬ್ಬಗಳ ಕಿರುಪರಿಚಯವನ್ನು ಇಲ್ಲಿ ನೋಡೋಣ, ಹಂಚೋಣ ಹಾಗೂ ಸಹಭಾಗಿಯಾಗೋಣ.

## ಗುಳ್ಳವ್ವ:

ಹೆಸರಲ್ಲೇ ಮಣ್ಣಿನ ಸುಗಂಧವನ್ನು ಹೊತ್ತು ತರುವ ಗ್ರಾಮೀಣ ಪ್ರದೇಶದ ಮನೆ ಮನೆಯ ಸಂಭ್ರಮ ಈ ಗುಳ್ಳವ್ವ ಹಬ್ಬ. ಆಷಾಢ ಮಾಸದಲ್ಲಿ ಬರುವ ಇದು ಮಣ್ಣಿನ ಮಕ್ಕಳಿಗೆ ಬಲು ಸಂಭ್ರಮದ -ಸಡಗರದ ಹಬ್ಬ. ಗುಳ್ಳವ್ವ ಎಂದರೆ ಮುಂಗಾರಿನ ದೇವತೆಯ ಸ್ವರೂಪ ಎಂದು ಹೇಳಲಾಗುತ್ತದೆ. ಈಕೆ ಮಳೆ ಹಾಗೂ ಸಂಪತ್ತಿನ ಅಧಿದೇವತೆ. ಉತ್ತರ ಕರ್ನಾಟಕದಲ್ಲಿ ಆಷಾಡ ಮಾಸದಲ್ಲಿ ಹೆಂಗಳೆಯರೆಲ್ಲ ಗುಳ್ಳವ್ವನನ್ನು ಹಾಡಿ, ಹೊಗಳಿ ಸಂಭ್ರಮಿಸುವ ಪರಿ ಕಣ್ತುಂಬಿಕೊಳ್ಳುವಂತಹದು.

ಗುಳ್ಳವ್ವ ದೇವತೆಗೆ ಗುಳಕವ್ವ, ಗೋಲಕವ್ವ, ಎಂಬ ಇತರೆ ಹೆಸರುಗಳೂ ಉಂಟು. ರೈತರಿಗೆ ಭೂಮಿತಾಯಿಯ ಮಹತ್ವ ಪ್ರಕೃತಿಯ ಸಹಕಾರದ ಮೇಲಿರುವ ನಂಬಿಕೆಯ ಪ್ರತೀಕವೇ ಈ ಆಚರಣೆಯ ಪ್ರತೀತಿಯನ್ನಬಹುದು.

ಮಣ್ಣೆತ್ತಿನ ಅಮಾವಾಸ್ಯೆಯ ನಂತರ ಬರುವ ನಾಲ್ಕು ಅಥವಾ ಐದು ಮಂಗಳವಾರ ಸತತವಾಗಿ ನಾಗರ ಅಮಾವಾಸ್ಯೆಯವರೆಗೂ ಈ ಹಬ್ಬ ಆಚರಿಸಲಾಗುತ್ತದೆ. ಮಹಿಳೆಯರು ಕುಂಬಾರರ ಕಡೆಯಿಂದ ಕರಿ ಹಸಿ ಮಣ್ಣು ತಂದು ಗುಳ್ಳವ್ವನನ್ನು ತಯಾರಿಸುತ್ತಾರೆ. ಕೆಂಪು ಗುಲಗಂಜಿ ಕುಸುಬಿ, ಚುರುಮರಿ, ಜೋಳ, ಅರಿಶಿನ, ಕುಂಕುಮ  ಎಲ್ಲ ತರಹದ ಧಾನ್ಯಗಳನ್ನ ಅಂಟಿಸಿ ಅಲಂಕರಿಸಲಾಗುತ್ತದೆ. ನಂತರ ಚಂದದ ರಂಗೋಲಿಯ ಬಿಡಿಸಿ ಮಣೆಯ ಮೇಲೆ ಗುಳ್ಳವ್ವನನ್ನು ಕೂರಿಸಿ ಪೂಜೆ ಮಾಡಲಾಗುತ್ತದೆ. ಒಡವೆಗಳನ್ನು ಸಹ ಹಾಕಿ ಸಿಂಗರಿಸಲಾಗುತ್ತದೆ.

ಮೊದಲನೆಯ ವಾರ ಎರಡು ಗುಳ್ಳವ್ವ ಎರಡನೇ ವಾರ ಗುಳ್ಳವ್ವನ ಜೊತೆ ಅವಳ ಸೋದರಿ, ಚಿನಮರಿಯ ಚಿಕ್ಕ ಮೂರ್ತಿ ಇಟ್ಟು ಪೂಜಿಸಲಾಗುತ್ತದೆ. ಮೂರನೇ ವಾರ ನವಿಲಿನ ಮೂರ್ತಿ ಹಾಗೂ ಕೊನೆಯ ವಾರ ಆನೆಯ ಮೂರ್ತಿಯನ್ನು ಪೂಜಿಸುತ್ತಾರೆ. ನವಿಲು ಸಂಭ್ರಮದ ಸಂಕೇತವಾದರೆ ಆನೆ ಸಿರಿ ಸಂಪತ್ತಿನ ಸಂಕೇತವಾಗಿ ಪೂಜಿಸಲಾಗುತ್ತದೆ. ಜನಪದ ಹಾಡಿನಲ್ಲಿ ಗುಳ್ಳವ್ನನ್ನು ಹಾಡಿ ಹೊಗಳಿ ಸಂಭ್ರಮಿಸುತ್ತಾರೆ. ಹಾಡಿನೊಳಗೆ ಊರಿನ ಹೆಸರುಗಳನ್ನು ಹೇಳುತ್ತಾ ಆರತಿ ಬೆಳಗುತ್ತಾರೆ. ಐದು ವಾರಗಳ ಬಳಿಕ ಎಲ್ಲ ಬಂಧು-ಬಾಂಧವರೊಡನೆ ಕೂಡಿ ಹೊಲಗದ್ದೆಗಳಿಗೆ ಹೋಗಿ ಊಟ ಮಾಡಿ, ಆಟವಾಡಿ ಪ್ರಕೃತಿಯ ಮಡಿಲಿನ ಸುಖವನ್ನು ಅನುಭವಿಸುತ್ತಾರೆ. ಆ ಸಂಭ್ರಮದ ಆಚರಣೆ, ಅನುಸರಣೆ ಕಣ್ಣಿಗೊಂದು ಹಬ್ಬವಾದರೆ, ನಮ್ಮ ನಾಡಿನ ಸಂಸ್ಕೃತಿಯ ಬಗೆಗಿನ ಹೆಮ್ಮೆಯ ವಿಷಯ ಕೂಡ ಆಗಿದೆ.

# ನಮ್ಮ ಹಬ್ಬಗಳು

## ಸಿರಿಯಾಳ ಷಷ್ಟಿ:

ಭಕ್ತಿಯ ಪರಾಕಾಷ್ಠೆ ಹಾಗೂ ತ್ಯಾಗದ ಪ್ರತೀಕವೇ ಈ ಸಿರಿಯಾಳ ಷಷ್ಟಿಯ ಆಚರಣೆ. ಸಿರಿಯಾಳ ಎಂಬ ಶಿವನ ಭಕ್ತನ ಭಕ್ತಿಯ ಮೇರೆಯನ್ನು ಪರೀಕ್ಷಿಸಲು ಬಂದ ಸಾಕ್ಷಾತ್ ಶಿವನೇ ಭಕ್ತಿಗೆ ಭಾವಪರಶವಾದಂತಹ ನಿದರ್ಶನ ಇದಾಗಿದೆ. ಮಗನ ಪ್ರಾಣವನ್ನೇ ಲೆಕ್ಕಿಸದೆ ತನ್ನ ಇಷ್ಟ ದೈವದ ಆಜ್ಞೆಯ ಮೇರೆಗೆ ತನ್ನ ಮಗನನ್ನು ಕೊಂದು ಅರ್ಪಿಸಿದ ಶ್ರೇಷ್ಠ ಭಕ್ತ ಈ ಸಿರಿಯಾಳ ಅವನ ಭಕ್ತಿಗೆ ಮೆಚ್ಚಿ ಶಿವನ ವರದಂತೆ ಆ ದಿನವನ್ನು ಸಿರಿಯಾಳ ಷಷ್ಟಿ ಎಂದು ಇಂದಿಗೂ ಆಚರಿಸಲಾಗುತ್ತದೆ.

ಗ್ರಾಮೀಣ ಭಾಗಗಳಲ್ಲಿ ಹೆಚ್ಚಾಗಿ ಸಂಭ್ರಮಿಸುವ ಈ ಹಬ್ಬ ಶ್ರಾವಣದಲ್ಲಿ ಬರುತ್ತದೆ.ಈ ದಿನ ಗಂಡು ಮಗುವಿನ ತಾಯಿ ಶಿವನನ್ನು ಪೂಜಿಸುತ್ತಾರೆ. ಮನೆಯ ಗಂಡು ಮಕ್ಕಳನ್ನು ಮಣೆಯ ಮೇಲೆ ಕೂರಿಸಿ ಆರತಿ ಮಾಡಲಾಗುತ್ತದೆ. ಆ ದಿನ ಭೋಜನದಲ್ಲಿ ಅನ್ನ, ಚಿತ್ರಾನ್ನ, ಬೆಲ್ಲದ ಅನ್ನ, ತುಪ್ಪದ ಅನ್ನ ಹಾಗೂ ಮೊಸರನ್ನ ಹೀಗೆ ಐದು ವಿಧದ ಅನ್ನವನ್ನು ತಯಾರಿಸಿ ಸೊಪ್ಪಿನ ಪಲ್ಯ, ಎಲೆ, ತರಕಾರಿ ಖಾದ್ಯ, ಪಾಯಸ ಹಾಗೂ ತಂಬಿಟ್ಟು ಕೂಡ ಮಾಡಿ ಅಕ್ಕಪಕ್ಕದ ಗಂಡು ಮಕ್ಕಳ ತಾಯಂದಿರನ್ನು ಊಟಕ್ಕೆ ಆಹ್ವಾನಿಸಲಾಗುತ್ತದೆ. ಅವರಿಗೆ ಮಂಗಳ ದ್ರವ್ಯ, ಪವಿತ್ರ ವಸ್ತುಗಳನ್ನು ನೀಡಿ ಊಟಪಡಿಸಲಾಗುತ್ತದೆ. ಅವರು ಮನೆಯಿಂದ ಹೊರಡುವಾಗ ಮಗನ ಹೆಸರನ್ನು ಹೇಳಿ ಅವರಿಗೆ ನಮಸ್ಕರಿಸಿ ಕಳಿಸುತ್ತಾರೆ.

## ನಾಗ ಪಂಚಮಿ:



ಹಿಂದೂ ಸಂಪ್ರದಾಯದ ಮಹತ್ವದ ಹಾಗೂ ಐತಿಹಾಸಿಕ ಹಿನ್ನೆಲೆಯ ಇನ್ನೊಂದು ಪ್ರಮುಖವಾದ ಹಬ್ಬ. ನಾಗರ ಪಂಚಮಿಯನ್ನು ಹೆಣ್ಣು ಮಕ್ಕಳ ಹಬ್ಬ ಎಂದೇ ಕರೆಯಲಾಗುತ್ತದೆ. ಹೆಂಗಳೆಯರೆಲ್ಲರೂ ಸಂಭ್ರಮದಿಂದ ಕೂಡಿ ನಾಗದೇವತೆಯ ಆರಾಧಿಸಿ ಸಕಲ ಇಷ್ಟಾರ್ಥಗಳ ಬೇಡಿ ಪೂಜೆ ಮಾಡುತ್ತಾರೆ. ಪಂಚಮಿ ಹಬ್ಬ ಎಂದರೆ ಬಹಳ ಹೆಣ್ಣು ಮಕ್ಕಳು ತಮ್ಮ ತವರಿಗೆ ತೆರಳಿ ಆಚರಿಸುವ ಹಬ್ಬ, ಅಕ್ಕ- ತಂಗಿ, ಅಣ್ಣ ತಮ್ಮಂದಿರೊಡನೆ ಕೂಡಿ ಸಂಭ್ರಮಿಸುವ ವಿಶೇಷ ಅವಕಾಶ. ಈ ದಿನ ಹೆಣ್ಣು ಮಕ್ಕಳೆಲ್ಲರೂ ನಾಗದೇವರ ದೇವಸ್ಥಾನಕ್ಕೆ ತೆರಳಿ ಹಾಲೆರದು ಎಳ್ಳುಂಡೆ, ಶೇಂಗಾ ಉಂಡೆ, ತಂಬಿಟ್ಟು ಕರ್ಚಿಕಾಯಿ, ಎಳ್ಳುಚಿಗಳಿ ಎಲ್ಲ ಸಾಮಗ್ರಿಗಳನ್ನು ನಾಗದೇವರಿಗೆ ಅರ್ಪಿಸಿ ಪ್ರಾರ್ಥಿಸುತ್ತಾರೆ. ಹಾಲು, ಬೆಲ್ಲದ ನೀರಿನಿಂದ ನಾಗದೇವರಿಗೆ ಅಭಿಷೇಕ ಮಾಡಲಾಗುತ್ತದೆ.

ಈ ಹಬ್ಬದಲ್ಲಿ ಕೆಲವು ಗ್ರಾಮೀಣ ಕ್ರೀಡೆಗಳನ್ನು ಸಹ ನಾವು ನೋಡಬಹುದು. ವಯಸ್ಸಿನ ಅಂತರವಿಲ್ಲದೆ ಎಲ್ಲರೂ ಈ ಆಟಗಳನ್ನು ಆಡಿ ಸಂಭ್ರಮಿಸುತ್ತಾರೆ. ಮರಕ್ಕೆ ಜೋಕಾಲಿಯನ್ನು ಕಟ್ಟಿ ಆಡುವುದು, ಖಾದ್ಯಗಳನ್ನು ಸೇವಿಸುವ ಸ್ಪರ್ಧೆ, ನೃತ್ಯ ಸ್ಪರ್ಧೆ ,ಜೋಕಾಲಿಯ ಸ್ಪರ್ಧೆ, ನಿಧಾನಗತಿಯ ಸ್ಪರ್ಧೆ, ಹೀಗೆ ಅನೇಕ ಆಟಗಳನ್ನು ಆಡಿ ಸಂಭ್ರಮಿಸುತ್ತಾರೆ. ಮನೆಯ ಹೊಸ್ತಿಲಲ್ಲಿ ಪೂಜೆ ಮಾಡಿ ಅಣ್ಣ ತಮ್ಮಂದಿರ ಬೆನ್ನ ಮೇಲೆ ನಾಗಪ್ಪನ ಚಿತ್ರ ಬರೆದು ಬ್ಯಾಳಿ- ಭಂಡಾರ ಒಡೆಸುವ ಕಾರ್ಯಕ್ರಮ ಗ್ರಾಮೀಣ ಪ್ರದೇಶದಲ್ಲಿ ಕಾಣಬಹುದು. ಇನ್ನೊಂದು ವಿಶೇಷವೆಂದರೆ ಮನೆಯಲ್ಲಿಯ ಚಿಕ್ಕ ಮಕ್ಕಳಿಗೆ ಕೊಬ್ಬರಿ ಬಟ್ಟಲಿಗೆ ದಾರವನ್ನು ಕಟ್ಟಿ ಆಟವಾಡಲು ಒಂದು ವಿಶೇಷ ಆಟಿಕೆಯನ್ನು ಮಾಡಿಕೊಡಲಾಗುತ್ತದೆ ಅದೇ “ಬೋಲ ಬಗರಿ” ಆಟ. ಹೀಗೆ ಆಧುನಿಕತೆಯ ಸಮಯದಲ್ಲೂ ಹಳ್ಳಿ ಗಳಲ್ಲಿ ನಮ್ಮ ಸಂಸ್ಕೃತಿಯ ಸೊಗಡು ಮಾಸದಂತೆ ಉಳಿದಿರುವುದು ಹೆಮ್ಮೆಯ ಸಂಗತಿ ಆಗಿದೆ.



ಮಡಿಲಿಗೆ ಬಿದ್ದದ್ದನ್ನೆಲ್ಲ
ದಹಿಸಿ ಭಸ್ಮವಾಗಿಸುವುದಷ್ಟೇ
ಅಗ್ನಿಯ ಕಾಯಕವಲ್ಲ
ಬಂಗಾರವ ಪುಟಕಿಟ್ಟು
ಕಬ್ಬಿಣವ ಮೃದುವಾಗಿಸಿ
ಹಸಿಮಣ್ಣ ಗಟ್ಟಿ ಇಟ್ಟಿಗೆಯಾಗಿಸಿ
ಕಟ್ಟಡವಾಗಿಸುವಂತೆ
ಧ್ಯಾನ ಅಜ್ಞಾನವಳಿಸಿ ಜೀವವ
ಜ್ಞಾನದಾಗರವಾಗಿಸೀತು ಮನವೆ

- ರತ್ನಾಬಡವನಹಳ್ಳಿ

ಪ್ರತಿಜೀವದ ಗುಣಗಳಲಿ
ಅಡಗಿಹುದೊಂದು ನ್ಯೂನತೆ

ತಾಳ್ಮೆಸಹನೆಯಲ್ಲ ದೌರ್ಬಲ್ಯ
ಅನ್ಯರ ದುರ್ಬಲತೆ ಬಳಸಿ
ದುರ್ಬಳಕೆ ಮಾಡಲು
ಸಿಗುವುದೇನು ಮೌಲ್ಯ
ನಡೆನುಡಿಯಾಗಲಿ ಅಮೂಲ್ಯ
ತಿಳಿ ನೀ ನಮ್ರತೆಯ ಮನವೇ

- ರತ್ನಾಬಡವನಹಳ್ಳಿ*

ನಿನ್ನೆ ಸಾಯಂಕಾಲ  ಬಜಾರ್ ಗೆ ಹೋಗಿದ್ದೆ, ನಮ್ಮ ಅಚ್ಚಕನ್ನಡದ ಗಣಿತದ ಗುರುಗಳು ಕಂಡರು, ವಿಧೇಯತೆಯಿಂದ ಮಾತನಾಡಿಸಿ ಕ್ಷೇಮ ಸಮಾಚಾರ ವಿಚಾರಿಸಿದೆ. ಹಾಗೆಯೇ ಹಳೆಯ ನೆನಪುಗಳನ್ನು ಮೆಲುಕು ಹಾಕಿದೆ. ಅವರು ಸಂತಸಪಟ್ಟರು. ಸಹಜವಾಗಿ ಅವರ ಮೊಬೈಲ್ ಸಂಖ್ಯೆ ಕೇಳಿದೆ. ಗುರುಗಳು ಗಾಂಭೀರ್ಯದ ಧ್ವನಿಯಲ್ಲಿ ಹೇಳಿದರು,
‘ಎಂಟು ಅಬ್ಜ ಹನ್ನೆರಡು ಕೋಟಿ ಮೂವತ್ತಾರು ಲಕ್ಷ ತೊಂಬತ್ತೆರಡು ಸಾವಿರ ಒಂಬೈನೂರು ಎಂಬತ್ತಾರು‘
ನನಗೆ ಸ್ವಲ್ಪ ಗೊಂದಲವಾಯಿತು, ಮತ್ತೊಮ್ಮೆ ಕೇಳಬೇಕೆಂದೆ....ಬಾಲ್ಯದಲ್ಲಿನ ಗುರುಗಳ 🤛 ಹೊಡೆತ 😓 ನೆನಪಾಯಿತು, ಮೆಲ್ಲನೇ ಜಾಗ ಖಾಲಿ ಮಾಡಿದೆ!!!

(ಸಿನಿಮಾ ಧಾಟಿಯಲ್ಲಿ) ಮೆಲ್ಲಗೆ ನಡೆ ಮೆಲ್ಲಗೆ ಈ ಕೋಪವೇಕೆ ಚಿನ್ನಾ... ಮಲ್ಲಿಗೆ ನನ್ನ ಮಲ್ಲಿಗೆ ನೀ ಕಾಡಬೇಡಾ ನನ್ನ!!!
🤫 😂 🤣 😂 🤣

ಕುಂದನ ಎಡ್ಕೆ

ಜಾಹೀರಾತು





## ನನ್ನ ಹೆಸರಿನ ಕಥೆ

ಹಿಂದೆ ನಾಗರಪಂಚಮಿಯೆಂದರೆ ಇಡೀ ಊರಿನವರೆಲ್ಲ ಸಂಭ್ರಮದಿಂದ ಆಚರಿಸುತಿದ್ದರು. ಹಳ್ಳಿಯಲ್ಲಿ ನಾಗರಕಲ್ಲು ಮತ್ತು ಊರಿನ ಬಾಗಿಲಲ್ಲಿ ಕರುವುಗಲ್ಲು ಅಂತ ಪ್ರತಿಷ್ಠಾಪಿಸುತಿದ್ದರು. ಪಂಚಮಿ ದಿನ ಕರುವುಗಲ್ಲಿಗೆ ಹಾಲುತುಪ್ಪ ಹಾಕಿ ಪೂಜೆ ಮಾಡುವ ಪದ್ದತಿ. ನಮ್ಮ ಮನೆ ಎದುರೇ ಈ ಕಲ್ಲು ಇದ್ದದ್ದು. ನನ್ನಮ್ಮ ಬಾಣಂತನಕ್ಕಾಗಿ ಊರಿಗೆ ಬಂದಿದ್ದರಂತೆ. ತುಂಬುಗರ್ಭಿಣಿ ಅಂದು ನಾಗರ ಪಂಚಮಿ ಹಾಲೆರೆಯಲು ಬಂದವರೆಲ್ಲ ನಮ್ಮ ತಾಯಿಗೆ ಕುಂಕುಮ, ತಾಂಬೂಲ ಕೊಟ್ಟು ಮಾತಾಡಿಸಿ ಹೋಗುತ್ತಿದ್ದರಂತೆ, ಅಮ್ಮನಿಗೆ ಮಧ್ಯಾಹ್ನ ಹೆರಿಗೆ ನೋವು ಶುರುವಾಗಿದೆ.  ಆಗ ಒಂದು ಮನೆಯ ಹೆಣ್ಣುಮಗಳಿಗೆ ಹೆರಿಗೆ ನೋವು ಕಾಣಿಸಿಕೊಂಡರೆ  ಮಗು ಹುಟ್ಟಿ ಅಳುವಿನ ಧ್ವನಿ ಕೇಳುವವರೆಗೂ ಹಿರಿಯರು ಬಂದು ಅಂಗಳದಲ್ಲಿ ಕಾಯ್ತಾ, ಮಾತಾಡ್ತಾ ಕುಳಿತುಕೊಳ್ಳುತಿದ್ದರು. ಹಾಗಿತ್ತು ಅವಾಗಿನ ಬಾಂಧವ್ಯ, ಬ್ರಾಹ್ಮಣರಲ್ಲಿ ಗಂಡ ಹೋದರೆ ತಲೆ ಬೋಳು ಮಾಡಿಸಿ ಕೆಂಪು ಸೀರೆ ಉಡಿಸುತಿದ್ದರು. ಬೋಡಮ್ಮಜ್ಜಿ ಅಂತಲೇ ಕರೆಯುತಿದ್ದೆವು ನಾವು ಚಿಕ್ಕವರಾಗಿದ್ದಾಗ. ಶ್ಯಾನುಭೋಗರ ತಾಯಿ ಬೋಡಮ್ಮಜ್ಜಿ ಮತ್ತು ಹಾಲೆರೆಯಲು ಬಂದ ಕೆಲ ಹಿರಿಯರು ಎಲ್ಲ ಕಾಯುತ್ತಾ ಕುಳಿತಿದ್ದರಂತೆ. ನಾನು ಹುಟ್ಟಿದಾಕ್ಷಣ ಅಳುವ ಧ್ವನಿ ಕೇಳಿದವರೇ ಎಲ್ಲರೂ "ಇನ್ನೇನು ನಾಗರಪಂಚಮಿ ನಾಗರತ್ನ ಹುಟ್ಟಿದಾಳೆ" ಅಂತ ಹೇಳಿ ಹಿರಿಯರೆಲ್ಲ ಸೇರಿ ಇಟ್ಟ ಹೆಸರೇ ಶಾಶ್ವತವಾಯ್ತು. ಮೊರದಲ್ಲಿ ಹಾಕಿದ ನನ್ನನ್ನು ನೋಡಿ ಹರಸಿ ಹಾರೈಸಿದ ಅಮೃತಫಳಿಗೆ ನಾ ರತ್ನಳಾದೆ.

“ನಾಗ” ಪಂಚಮಿಯಲ್ಲೇ ಉಳಿಯಿತು. ರತ್ನಾ ಎನ್ನುವ ಹೆಸರು ಜೊತೆಯಾಯ್ತು. ನನಗೆ ಬುದ್ಧಿ ಬರುವವರೆಗೂ ಆ ಬೋಡಜ್ಜಿ ಬದುಕಿತ್ತು. ಅವರ ಮನೆಯ ಮುಂದೆ ಓಡಾಡುವಾಗೆಲ್ಲ "ನಾನೇ ಕಣೆ ನಿಂಗೆ ಹೆಸರಿಟ್ಟಿದ್ದೂ" ಅಂತ ಕೂಗಿ ಹೇಳ್ತಿತ್ತು. ನಾನೊಂದು ನಗುಬೀರಿ ಸಾಗುವಾಗ "ಮುದ್ದಾದ ಹುಡುಗಿ ಜೀವನ್ದಲ್ಲಿ ಸದಾ ಚೆನ್ನಾಗಿರಲಿ"  ಹಾರೈಕೆಯ ನುಡಿಗಳು ಕೇಳಿಸುತಿದ್ದವು.

ಅವರೆಲ್ಲರ ಹಾರೈಕೆಯ ಕೂಸು ಇಂದು *ರತ್ನಾ ಬಡವನಹಳ್ಳಿ* ಯಾಗಿ ಊರಿನ ಹೆಸರನ್ನು ಪರಿಚಯಿಸಿದೆ.

- ರತ್ನಾ ಬಡವನಹಳ್ಳಿ

# ತಿಂಗಳ ವ್ಯಕ್ತಿ

## ಶ್ರೀಮತಿ ಅನ್ನಪೂರ್ಣ ಸಕ್ರೋಜಿ



ಮುಗುಳ್ನಗೆ, ಶಾಂತ ಮುಖಭಾವದ ಶ್ರೀಮತಿ ಅನ್ನಪೂರ್ಣ ಸಕ್ರೋಜಿಯವರು ಕಲೆಗಳ ಐಸಿರಿಯನ್ನೇ ತಮ್ಮಲ್ಲಿ ತುಂಬಿಕೊಂಡವರು.

ಧಾರವಾಡದ ಅಗ್ರಿಕಲ್ಚರ್ ಕಾಲೇಜಿನಲ್ಲಿ ಕ್ಯಾಶಿಯರ್ ಆಗಿದ್ದ ತಂದೆ ಕೊಟ್ರಪ್ಪ ಬಾಡದ ಹಾಗು ತಾಯಿ ಪಾರ್ವತಿಯವರ ಆರನೆ ಸಂತಾನವಾಗಿ ಜನಸಿದ ಅನ್ನಪೂರ್ಣ ಅವರು ಅಧ್ಯಾತ್ಮದ ಭಕ್ತಿಯ ಬೆಳಕಿನ ವಾತಾವರಣದಲ್ಲಿ ಬೆಳೆದವರು.ತಂದೆಯವರ ಪ್ರೇರಣೆಯಿಂದ ಬರೆಯಲು ಆರಂಭಿಸಿದ ಅವರು ಈಗ ಲೇಖನ,ಕವಿತೆ, ಎಂಬ್ರಾಯ್ಡರಿ, ಎಲ್ಲ ತರದ ಪೇಂಟಿಂಗ್ಸ, ರಂಗೋಲಿ, ಬೋನ್ಸಾಯಿ, ಪಾಕಕಲೆ, ಮಕ್ಕಳಿಗೆ ಆರ್ಟ್ಸ ಮತ್ತು ಕ್ರಾಫ್ಟ ಕಲಿಸುವದು ಇತ್ಯಾದಿಗಳಲ್ಲಿ ಪಾರಂಗತರು.

ಅವರು ರಚಿಸಿದ ಸಚಿತ್ರ ಭಗವದ್ಗೀತೆ ಹಾಗು ಅರಬಿಂದೊ ಘೋಷವರ ಮರಾಠಿಯಿಂದ ಕನ್ನಡಕ್ಕೆ ಅನುವಾದ ಮಾಡಿದ ಭವಾನಿ ಭಾರತಿ ಕೃತಿಗಳು ಈಗಾಗಲೆ ಮುದ್ರಿತಗೊಂಡಿವೆ, ಮರಾಠಿಯಿಂದ ಕನ್ನಡಕ್ಕೆ ಅನುವಾದಮಾಡಿದ ಬ್ರಹ್ಮ ಚಿಂತನಿಕಾ, ಇನ್ನೂ ಮುದ್ರಣವಾಗಬೇಕಾಗಿದೆ.

ಭಾವನೆಗಳನ್ನು ಸರಳ ಶಬ್ದಗಳಲ್ಲಿ ತುಂಬಿ ಮನತಟ್ಟುವ ಕವನ ಬರೆಯುವದರಲ್ಲಿ ಅನ್ನಪೂರ್ಣ ಅವರದು ಸಿದ್ಧ ಹಸ್ತ. ಅವರು ಬರೆದ ಕರ್ಮಯೋಗಿ ಕವಿತೆಗೆ ಪ್ರಧಾನ ಮಂತ್ರಿ ನರೇಂದ್ರ ಮೋದಿಜಿಯವರಿಂದ ಅಭಿನಂದನೆಯ ಪತ್ರ ಕೂಡ ಬಂದಿದೆ. ಕಂಪು ಬಳಗದಲ್ಲಿ ಎಲ್ಲ ಸಂದರ್ಭಗಳಲ್ಲಿ ಸಮಯೋಚಿತ ಕವನಗಳನ್ನು ಬರೆಯುವದಲ್ಲದೇ, ಇತರ ಕವಿಗಳಿಗೂ ಅವರು ಹುಮ್ಮಸ್ಸು ತುಂಬುವದು ಪ್ರಶಂಸನೀಯ. ಕನ್ನಡ ಸಾಹಿತ್ಯದ ಸೇವೆಯಲ್ಲಿ ಸಕ್ರಿಯರಾದ ಅನ್ನಪೂರ್ಣ ಅವರು ಪುಣೆಯಲ್ಲಿ ನಡೆದ ಎಲ್ಲಾ ಕವಿಗೋಷ್ಠಿಗಳಲ್ಲಿ ಭಾಗವಹಿಸಿದ್ದಲ್ಲದೇ, ಸಾಂಗ್ಲಿ ಜಿಲ್ಲೆಯ ಸಂಖದಲ್ಲಿ ಜರುಗಿದ ಮಹಾರಾಷ್ಟ್ರ ಕರ್ನಾಟಕ ಗಡಿನಾಡ ಸಾಹಿತ್ಯದ ಕವಿಗೋಷ್ಠಿ, ಬೆಂಗಳೂರು ರೇಡಿಯೊ ಸ್ಟೇಶನ್ ದವರು ಏರ್ಪಡಿಸಿದ್ದ ಕವನ ವಾಚನ, ಇನ್ನೂ ಅನೇಕ ಸಾಹಿತ್ಯದ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದಾರೆ. ಅವರ ಸಾಹಿತ್ಯ ಸೇವೆಯನ್ನು ಗುರುತಿಸಿ ಕನ್ನಡ ರಾಜ್ಯೋತ್ಸವದ ನಿಮಿತ್ತ ಕರ್ನಾಟಕ ಶಾಲೆಯ ಕನ್ನಡ ಸಂಘದ ಕವಿಗೋಷ್ಠಿಗೆ ಮುಖ್ಯ ಅತಿಥಿಯಾಗಿ ಆಗಮಿಸಲಾಗಿತ್ತು.

ಅನ್ನಪೂರ್ಣ ಅವರಿಗೆ ಸಂದ ಪ್ರಶಸ್ತಿಗಳ ಬಗ್ಗೆ ಬರೆಯಲು ಇನ್ನೂ ಒಂದು ಪುಟವೇ ಬೇಕಾದೀತು. ಬೆಳಗಾವಿಯ ಹೊಂಬೆಳಕು ಸಾಂಸ್ಕೃತಿಕ ಸಂಘದ ವತಿಯಿಂದ ರಾಷ್ಟ್ರಕೂಟ ಸಾಹಿತ್ಯ ಶ್ರೀ ಪ್ರಶಸ್ತಿ, ಕಿತ್ತೂರು ಉತ್ಸವದಿಂದ ಪ್ರಶಸ್ತಿ, ಕರ್ನಾಟಕ ಸುವರ್ಣ ಸಂಭ್ರಮದ ನಿಮಿತ್ತ ಬಳ್ಳಾರಿಯಲ್ಲಿ ರಾಜ್ಯ ಮಟ್ಟದ ಕರ್ನಾಟಕ ಸಾಧಕ ರತ್ನ ರಾಜ್ಯೋತ್ಸವ ಪ್ರಶಸ್ತಿ, ಉತ್ತಮ ಸಾಹಿತಿ ಪ್ರಶಸ್ತಿ ನಾರೀಶಕ್ತಿಯ ಸ್ಮರಣಿಕೆ, ಕಿತ್ತೂರು ಚೆನ್ನಮ್ಮ, ಸಂಗೊಳ್ಳಿರಾಯಣ್ಣ, ಪ್ರಶಸ್ತಿ, ಇನ್ನೂ ಅನೇಕ ಪ್ರಶಸ್ತಿ, ಸನ್ಮಾನಗಳು ಅವರ ಪಾಲಾಗಿವೆ. ರಾಷ್ಟ್ರ ಮಟ್ಟದಲ್ಲಿ ನಡೆವ ಸ್ಪರ್ಧೆಗಳಲ್ಲಿ ಭಾಗವಹಿಸಿದ ಅವರು ಪ್ರಸ್ತುತ ಪಡಿಸಿದ ಕವಿತೆ, ಲೇಖನ, ಟಂಕಾ, ರುಬಾಯಿ, ನ್ಯಾನೊ ಕಥೆ, ಲಲಿತ ಪ್ರಬಂಧ, ನಿಬಂಧ, ಆಧುನಿಕ ವಚನ, ಜೋಗುಳ ಪದ, ಜಾನಪದ ಕವಿತೆ, ಗೀ ಗೀ ಪದ, ಅಬಾಬಿ, ಹಾಸ್ಯಲೇಖನ, ಭಗವದ್ಗೀತೆಯ ಸಾರ, ಇತ್ಯಾದಿ ಹಲವು ಪ್ರಕಾರಗಳಿಗೆ ವಿಶಿಷ್ಟ ಬರಹಗಾರರು, ಅದ್ಭುತ ಕವಿ, ಅತ್ಯುತ್ತಮ ಎನ್ನುವ ಪ್ರಶಸ್ತಿಗಳನ್ನು ಕೊಟ್ಟು ಗೌರವಿಸಿದ್ದಾರೆ.

ಉತ್ಸಾಹದ ಚಿಲುಮೆಯಾದ ಅವರ ಕಲಾ ಸೇವೆ ಹೀಗೆಯೇ ಮುಂದುವರೆಯಲಿ, ಸಹೃದಯಿ, ಸರಳತೆಯ ಮೂರ್ತಿಯಾದ ಅವರ ಕಲೆಯ ಬೆಳಕಿನಲ್ಲಿ ನಾವೆಲ್ಲ ಬೆಳಗೋಣ.





## ನಾಗರ ಪಂಚಮಿ

ಬರುವ ಪಂಚಮಿಯ ಹಬ್ಬಕ್ಕೆ
ಅಣ್ಣನ ಬರುವಿಕೆಯ ಅರಳು
ಕಣ್ಣಿಂದ ಕಾಯುತ್ತಲಿರುವೆ
ತವರುಮನೆಯ ಸೇರಲು ತವಕಿಸುತ್ತಿರುವೆ||

ನಳನಳಿಸುವ ಭಾವದಲೆಗಳ
ಹಸಿರು ತೋರಣ
ಅಮ್ಮನ ಕುಚ್ಚಿನ ಕಡುಬಿನ
ಸಿಹಿ ಹೂರಣ
ತಂಬಿಟ್ಟು ಅರಳು ಸೇಂಗಾದ
ಉಂಡಿಗಳ ಹರಿವಾಣ
ಶೇಷನ ನೇವೇದ್ಯಕ್ಕೆ ಎಲ್ಲಾ ಜೋಡಿಸಿಟ್ಟೆವು
ಒಪ್ಪಾಗಿ ಓರಣ||

ಅಕ್ಕತಂಗಿಯರು ಜೋಡಾಗಿ
ಜೀಕುವ ಜೋಕಾಲಿ
ಹೊಸ ಜರತಾರಿ ಲಂಗ ಸೀರೆಯ
ಧರಿಸಿ ಹರುಷದಲಿ
ಹಾಲ ನೆರೆಯಲು ನಾಗನಿಗೆ
ಸೇರಿದೆವು ಉತ್ಸಾಹದಲಿ
ಭೋರೆಂದು ಸುರಿವ
ಮಳೆಯ ಲೆಕ್ಕಿಸದಲಿ||

ಬಂಧು ಬಾಂಧವರು ಸೇರಿ
ಆಚರಿಸುವ ಉತ್ಸವಗಳು
ಮರೆಯಾಗುತ್ತಲಿವೆ ಪ್ರೀತಿ
ಸ್ನೇಹ ಬಾಂಧವ್ಯಗಳು
ಮನೆಯಲ್ಲಿ ತಯಾರಿಸುವ ತರತರಹ
ಸಿಹಿ ಉಂಡೆಗಳು
ಮತ್ತೆ ಮರಳಲಿ ಹಳ್ಳಿ ಸೊಗಡಿನ ನಮ್ಮ
ನಾಡ ಹಬ್ಬಗಳು||

- ಆರತಿ. ಎನ್.ರಾವ್

# ಬ್ರಹ್ಮಶ್ರೀ ನಾರಾಯಣ ಗುರು ಸೇವಾ ಸಮಿತಿ – ಬಿಲ್ಲವ ಸಂಘ, ಪಿಂಪ್ರಿ ಚಿಂಚವಾಡ – ವಾರ್ಷಿಕ ಸಭೆ






ಬ್ರಹ್ಮಶ್ರೀ ನಾರಾಯಣ ಗುರು ಸೇವಾ ಸಮಿತಿ ಬಿಲ್ಲವ ಸಂಘ, ಪಿಂಪ್ರಿ ಚಿಂಚವಾಡ ಅವರು ಜು 28 ರಂದು ಪಿಂಪ್ರಿ ಸಂತ ತುಕಾರಾಮ ನಗರದ ಆಚಾರ್ಯ ಅತ್ರೆ ರಂಗ ಮಂದಿರದಲ್ಲಿ ವಾರ್ಷಿಕ ಸಭೆ ಹಾಗು ಸ್ನೇಹ ಸಮ್ಮೇಳನ ಏರ್ಪಡಿಸಿದ್ದರು. ಸಂಘದ ಅಧ್ಯಕ್ಷ ಶ್ರೀ ನವೀನ ಕೋಟ್ಯಾನರ ಅಧ್ಯಕ್ಷತೆಯಲ್ಲಿ ನಡೆದ ಈ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ International Iconic ಪ್ರಶಸ್ತಿ ಗಳಿಸಿದ ಡಾ| ಪ್ರತಿಭಾ ಸಾಲಿಯಾನ, ಕವಿ-ಸಾಹಿತಿ ಶ್ರೀಮತಿ ಶಾರದಾ ಅಂಚನ ಮತ್ತು ಅತಿಥಿಗಳಾಗಿ ಪುಣೆ ಬಿಲ್ಲವ ಸಂಘದ ಅಧ್ಯಕ್ಷ ಶ್ರೀ ವಿಶ್ವನಾಥ ಪೂಜಾರಿ ಕಡ್ತಲ್ ಉಪಸ್ಥಿತರಿದ್ದರು.

ಅತಿಥಿಗಳು ಜ್ಯೋತಿ ಬೆಳಗಿಸಿ ಸ್ನೇಹ ಸಮ್ಮೇಳನ ಕಾರ್ಯಕ್ರಮ ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಸಭೆ ಉದ್ದೇಶಿಸಿ ಮಾಡಿದ ತಮ್ಮ ಭಾಷಣದಲ್ಲಿ ಡಾ| ಪ್ರತಿಭಾ ಸಾಲಿಯಾನ ಅವರು 'ಮಹಿಳೆಯರಲ್ಲಿ ಪ್ರತಿಭೆಗಳು ದತ್ತವಾಗಿ ಬಂದಿರುತ್ತವೆ. ಮಹಿಳೆಯರು ಸಮಾಜದ ಎಲ್ಲಾ ಕ್ಷೇತ್ರಗಳಲ್ಲಿ ಬಹಳಷ್ಟು ಸಾಧನೆಗಳನ್ನು ಮಾಡುತ್ತಾ ಇದ್ದಾರೆ' ಎಂದು ಹೇಳಿದರು. ಮಕ್ಕಳ ಕಲಾ ಪ್ರತಿಭೆಯನ್ನು ಪ್ರೋತ್ಸಾಹಿಸುವುದರಲ್ಲಿ ಕುಟುಂಬ ಹಾಗು ಸಂಘ-ಸಂಸ್ಥೆಗಳ ಪಾತ್ರಕ್ಕೆ ಅವರು ಒತ್ತು ನೀಡಿದರು.

ಖ್ಯಾತ ಸಾಹಿತಿ ಶ್ರೀಮತಿ ಶಾರದಾ ಅಂಚನ ಕಡವೂರ ಅವರು ಮಾತನಾಡಿ, ಧರ್ಮ, ಆಚರಣೆ ಮತ್ತು ಸಂಸ್ಕಾರಗಳನ್ನು ಪಾಲಕರು ಮಕ್ಕಳಲ್ಲಿ ಬಿತ್ತುವ ಅನಿವಾರ್ಯತೆ ಮನದಟ್ಟುಮಾಡಿದರು. ತುಳುನಾಡ ಭಾಷೆ, ಕಲೆ, ಸಂಸ್ಕೃತಿ ಜೊತೆಯಲ್ಲಿ ದೈವಾರಾಧನೆ, ನಾಗಾರಾಧನೆ, ಪ್ರಕೃತಿಯೊಂದಿಗಿನ ಬದುಕು... ಇವೆಲ್ಲ ವೈಶಿಷ್ಟಪೂರ್ಣವಾಗಿದ್ದು, ಇವನ್ನು ಇಂದಿನ ಮಕ್ಕಳಿಗೆ ತಿಳಿಸಿಕೊಡುವ ಅಗತ್ಯತೆಯನ್ನು ವಿವರಿಸಿದರು.

ಸಂಘದ ಪ್ರಧಾನ ಕಾರ್ಯದರ್ಶಿ ಶ್ರೀ ಶ್ಯಾಮ ಸುವರ್ಣ, ಕೋಶಾಧಿಕಾರಿ ಶ್ರೀ ಪ್ರವೀಣ ಅಂಚನ, ಮಹಿಳಾ ಮಂಡಳದ ಅಧ್ಯಕ್ಷೆ ಶ್ರೀಮತಿ ಮಮತಾ ಅಂಚನ್, ಮತ್ತೆಲ್ಲ ಸಂಘದ ಪದಾಧಿಕಾರಿಗಳು ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಯಾಗಿ ನಡೆಸಿಕೊಟ್ಟರು. ಮಕ್ಕಳು ಮತ್ತು ಮಹಿಳಾ ಮಂಡಳದ ಸದಸ್ಯರಿಂದ ವೈವಿಧ್ಯಮಯ ನೃತ್ಯ, ಯಕ್ಷಗಾನ, ಮಿಮಿಕ್ರಿ ಮುಂತಾದ ಮನರಂಜನಾ ಕಾರ್ಯಕ್ರಮಗಳು ಸಭೆಗೆ ರಂಗು ತಂದುಕೊಟ್ಟವು.

ಕಾರ್ಯುಕ್ರಮದ ಸಂಚಾಲನೆ ನೂತನ ಸುವರ್ಣ ಅವರು ಸಮರ್ಥವಾಗಿ ವಹಿಸಿದರು. ಗೌರಿ ಸಾಲಿಯಾನರ ವಂದನಾರ್ಪಣೆಯೊಂದಿಗೆ ಕಾರ್ಯಕ್ರಮ ಸಂಪನ್ನಗೊಂಡಿತು. ಪಿಂಪ್ರಿ-ಚಿಂಚವಾಡ ಪರಿಸರದ ಸಮಾಜ ಬಾಂಧವರು ಭಾರಿ ಸಂಖ್ಯೆಯಲ್ಲಿ ಭಾಗವಹಿಸಿ ಸಮಾರಂಭಕ್ಕೆ ಮೆರಗು ತಂದರು.







# ಜ್ಯೋತಿ ದೇಸಾಯಿ












ಜ್ಯೋತಿ ದೇಸಾಯಿಯವರದು ವೈವಿಧ್ಯಮಯ ಕಲೆಯ ಪ್ರತಿಭೆ. ವಾಸ್ತುಶಿಲ್ಪ (Architecture) ದಲ್ಲಿ ಪದವೀಧರರಾದ ಜ್ಯೋತಿಯವರು ಆಂತರಿಕ ವಿನ್ಯಾಸ (Interior) ಸಲಹೆಗಾರರು.

ಚಿಕ್ಕಂದಿನಿಂದಲೂ ವರ್ಣಚಿತ್ರಕಲೆ ಹವ್ಯಾಸವಾಗಿ ಬೆಳೆಸಿಕೊಂಡ ಅವರು JDArts ಎಂಬ ತಮ್ಮ brand ಅಡಿಯಲ್ಲಿ ಅನೇಕ ಕೃತಿಗಳನ್ನು ಸಾಮಾಜಿಕ ಮಾಧ್ಯಮಗಳಲ್ಲಿ ಹಂಚಿಕೊಳ್ಳುತ್ತಾರೆ.

ಅವರು ಎಲ್ಲಾ ನೆಲೆಗಳಲ್ಲಿ - MDF, ಕ್ಯಾನ್ವಾಸ್, ಬಟ್ಟೆ, ಗೋಡೆ ತಟ್ಟೆ, ಬಾಟಲಿಗಳು, ಕ್ಯಾಲೆಂಡರ್, ಬ್ಲೌಸ ಹಿಂಬದಿ ಮತ್ತು ಸೀರೆಯ ಮೇಲೂ - ಚಿತ್ರಕಲೆ ಬಿಡಿಸಿದ್ದಾರೆ.

ಅವರ ಕೆಲ ಕೃತಿಗಳನ್ನು ಕಂಪು ಓದುಗರಿಗೆ ತಂದಿದ್ದೇವೆ. ಅವರನ್ನು jyothigk@yahoo.com ನಲ್ಲಿ ಸಂಪರ್ಕಿಸಬಹುದು.








# ಯುವ ಪ್ರತಿಭೆ- ಜಾನ್ಹವಿ ಮಾನಾ

ನಗುಮುಖದ ಸಂಕೋಚ ಸ್ವಭಾವದ ಜಾನ್ಹವಿ, ಹೆಸರಿಗೆ ತಕ್ಕಂತೆ ಜ್ಞಾನಗಂಗೆ. ತನ್ನ ಎಂಟನೆಯ ವರ್ಷದಿಂದ ಸಂಗೀತ ಅಂಟಿಸಿಕೊಂಡ ಮುದ್ದು ಜಾನ್ಹವಿ, ಕಳೆದ ಹತ್ತು ವರ್ಷಗಳಿಂದ ನಿರಂತರವಾಗಿ ಹಿಂದುಸ್ತಾನಿ ಶಾಸ್ತ್ರೀಯ ಸಂಗೀತದಲ್ಲಿ ತನ್ನನ್ನು ತೊಡಗಿಸಿಕೊಂಡಿದ್ದಾಳೆ.

ಯುವ ಜನರು ಡಿಸ್ಕೋ ಸಂಗೀತಕ್ಕೆ ಮಾರು ಹೋಗುವ ಕಾಲದಲ್ಲಿ, ಇವಳು ವಚನ, ದಾಸರ ಪದಗಳು, ಅಭಂಗ ಮತ್ತು ಭಾವಗೀತೆಗಳಲ್ಲಿ ತಲ್ಲೀನವಾಗಿರುತ್ತಾಳೆ. ಪುಣೆಯಲ್ಲಿ ನಡೆದ ಪುರಂದರ ದಾಸರ ಪದಗಳ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಗಳಿಸಿದ ಕೀರ್ತಿ ಇವಳದು. ಅನೇಕ ಸಂಗೀತ ಕಾರ್ಯಕ್ರಮ ನೀಡಿದ ಜಾನ್ಹವಿ, ಆಕಾಶವಾಣಿಯ ತಬಲಾ ವಾದಕ ಶ್ರೀ ಜ್ಞಾನೇಶ್ವರ ಬೆಲ್ಲೋಕಟ ಅವರೊಂದಿಗೆ ಕೂಡ ಸಂಗೀತ ಕಚೇರಿ ನಡೆಸಿಕೊಟ್ಟಿದ್ದಾಳೆ.

ಮಾನಾ ಅವರ ಕುಟುಂಬದಲ್ಲಿ ಸಂಗೀತ ಕಲೆ ಆನುವಂಶೀಯವಾಗಿ ಹರಿದು ಬಂದಿದೆ ಎಂದರೆ ತಪ್ಪಾಗಲಾರದು. ತಂದೆ ಉದ್ಯೋಗಪತಿ ಅಮರನಾಥ ಮಾನಾ ಅವರ ಗಾಯನದ ಗೀಳಿನಿಂದ ಚಿಕ್ಕಂದಿನಿಂದಲೇ ಪ್ರಭಾವಿತಳಾದ ಜಾನ್ಹವಿ, ಕುಟುಂಬದ ಸಂಗೀತ ಪರಂಪರೆಯನ್ನು ಮತ್ತಷ್ಟು ಬೆಳಗಿಸಿದ್ದಾಳೆ.



Artificial Intelligence and Data Science ಕ್ಷೇತ್ರದಲ್ಲಿ ಇಂಜಿನೀಯರಿಂಗ ಮಾಡುತ್ತಿರುವ ಜಾನ್ಹವಿ, ಸಂಗೀತದಷ್ಟೇ ಸಾಧನೆ ಶೈಕ್ಷಣಿಕ ಕ್ಷೇತ್ರದಲ್ಲೂ ಮಾಡಿರುವ, ಓರ್ವ ಮಾದರಿ ಪ್ರತಿಭಾವಂತ ಬಾಲಕಿ. ತನ್ನ ಈ ಸಾಧನೆಗೆ ತಂದೆ-ತಾಯಿಯ ಸಹಾಯ, ಪ್ರೋತ್ಸಾಹವೇ ಕಾರಣವೆನ್ನುವ ಈ ವಿನಮ್ರ ಹುಡುಗಿ, ಹೀಗೆಯೇ ಸಾಧನೆಗಳ ಉತ್ತುಂಗ ಶಿಖರವೇರಲಿ ಎಂದು ನಮ್ಮ ಹಾರೈಕೆ.



# ಅಪ್ಪ ಮತ್ತು ಟ್ರಿಣ್..... ಟ್ರಿಣ್....... ಸೈಕಲ್

- ಪ್ರಶಾಂತ ದೀಕ್ಷಿತ

ಅಪ್ಪಾ ಅಂದ ತಕ್ಷಣ ಎಲ್ಲರಿಗೂ ನೆನಪಾಗೋದು ಏನು?

ಕೆಲವರಿಗೆ ಚಾಕಲೇಟ್ ನೆನಪಾದ್ರೆ ಕೆಲವರಿಗೆ ಮೈಸೂರ ಪಾಕ್. ಮತ್ತೆ ಕೆಲವರಿಗೆ ಹಾಟ್ ವೀಲ್ ಕಾರ್ ಆದ್ರೆ ಕೆಲವರಿಗೆ ಬಾರ್ಬಿ ಡಾಲ್...ನನಗಂತೂ ನೆನಪಾಗೋದು ಟ್ರಿಣ್ ಟ್ರಿಣ್ ಸೈಕಲ್. ಹೌದು, ಮೂರು ಗಾಲಿ ಸೈಕಲ್ ಅಲ್ಲಾ.. ಎರುಡು ಗಾಲಿಯ 24" ಇಂಚಿನ ಎತ್ತರದ ಸೈಕಲ್. ಅದು ನಮ್ಮ ತಂದೆ ದಿನಾ ಅಡ್ಡಾಡೋ ಸೈಕಲ್. ಅದು ನನ್ನ ಮತ್ತು ನನ್ನ ತಂದೆಯ ಮೊದಲ ನೆನಪಿನಲ್ಲಿರುವ ಮತ್ತು ನೆನಪಿನಲ್ಲಿಡುವ ಕನೆಕ್ಷನ್.

ಆಗ ನಾವಿನ್ನು ಬೆಳಗಾವಿಯಲ್ಲಿದ್ದೆವು, ನನಗಿನ್ನೂ ಮೂರು ವರ್ಷ ತುಂಬಿರಲಿಲ್ಲ ಆಗಲೇ ನನಗೆ ನಮ್ಮ ತಂದೆ ಬಾಲವಾಡಿಗೆ (ಶಿಶುವಿಹಾರ) ಸೇರಿಸಿದ್ರು. ನನ್ನನ್ನು ದಿನಾಲು ಕರೆದುಕೊಂಡು ಹೋಗಲು ಶಾಂತವ್ವ ಎಂಬ ಅಜ್ಜಿ ಬರುತ್ತಿದ್ದಳು. ನಮ್ಮದು ವಠಾರದಲ್ಲಿಯ ಮೇಲಿನ ಮಹಡಿಯ ಪುಟ್ಟ ಮನೆಯಾಗಿತ್ತು. ಆ ಅಜ್ಜಿ ಕೆಳಗಿನಿಂದಲೇ "ಅದಾನೇನ್ರಿ......" ಎಂದು ಜೋರಾಗಿ ಕೂಗುತ್ತಿದ್ದಳು. ಆ ಧ್ವನಿ ಕೇಳಿದ ತಕ್ಷಣ ನನಗೆ ಹೊಟ್ಟೆ ರುಮ್ ಎಂದು ಮತ್ತೆ ಶಾಲೆಗೆ ಹೋಗ್ಬೇಕಲ್ಲ ಅಂತ ಸಂಕಟವಾಗ್ತಿತ್ತು. ಹಾಗೂ ಹೀಗೂ ಕಣ್ಣೀರು ಸುರಿಸುತ್ತ ಶಾಲೆಗೆ ಹೋಗುತ್ತಿದ್ದೆ.

ಇದಕ್ಕೆ ವಿಪರೀತವೆಂಬತೆ ಕೆಲವುಬಾರಿ ನಮ್ಮ ತಂದೆ ಬಿಡುವಿದ್ದಾಗ (ಮಧ್ಯಾನ್ಹ ಅಥವಾ ರಾತ್ರಿ ಶಿಫ್ಟ್ ಡ್ಯೂಟಿ ಇದ್ದಾಗ) ಅವರೇ ಸೈಕಲ್ ಮೇಲೆ ಬಾಲವಾಡಿಗೆ ಕರೆದೊಯ್ಯುತ್ತಿದ್ದರು. ಆಗ ಮಾತ್ರ ನನಗೆ ಎಲ್ಲಿಲ್ಲದ ಖುಷಿ. ಕಾರಣ ಏನಂದ್ರೆ, ಆ ಸೈಕಲ್ಗೆ ಮುಂದಿನ ಸರಳಿಗೆ ಒಂದು ಪುಟ್ಟದಾದ, ಮೆತ್ತಗಾದ ಸೀಟ್ ಕೂಡಿಸಿದ್ರು. ಮತ್ತೆ ಹ್ಯಾಂಡಲ್ಲಿಗೆ ಒಂದು ಪುಟ್ಟ ಟ್ರಿಣ್-ಟ್ರಿಣ್ ಗಂಟೆ ಕೂಡಾ ಕೂಡ್ಸಿದ್ರು. ನನಗೋಸ್ಕರ. ನಾನು ಆ ಪುಟ್ಟಾಸನದ ಮೇಲೆ ವಿರಾಜಮಾನವಾಗಿ ಕುಳಿತು ಶಹಾಪುರದ ಬೀದಿಗಳಲ್ಲೆಲ್ಲ ಟ್ರಿಣ್.. ಟ್ರಿಣ್. ಸದ್ದು ಮಾಡುತ್ತಾ ಸಾಗುತ್ತಿದ್ದೆ, ತುಂಬಾ ಮಜಾ ಎನಿಸುತ್ತಿತ್ತು. ಹೀಗೆ ನಮ್ಮ ಅಪ್ಪನ ಜೊತೆ ಶಾಲೆಗೆ ಹೋಗೋದು ಅಂದ್ರೆ ನನಗೆ ಹಿಗ್ಗೋ ಹಿಗ್ಗು. ಆಗ ನನಗಿನ್ನೂ ಕಾಲದ ಪರಿಜ್ಞಾನ ಇರಲಿಲ್ಲ ಎಷ್ಟು ದಿನ ಈ ಸೈಕಲಾನಂದ ಪಟ್ಟೆ ಎಂಬ ನೆನಪಿಲ್ಲ.

ಈ ಸಂತೋಷಕ್ಕೆ ಯಾರ ದೃಷ್ಟಿ ತಾಕಿತೋ ಏನೋ, ನಮ್ಮ ತಂದೆಗೆ ಹುಬ್ಬಳ್ಳಿಗೆ ವರ್ಗವಾಯಿತು. ನಾವೂ ಹಳೇ ಹುಬ್ಬಳ್ಳಿಗೆ ಶಿಫ್ಟ್ ಆದೆವು, ಆದ್ರೆ ಅಲ್ಲಿ ಅದೇ ಬೀದಿಯಲ್ಲಿ, ಕಲ್ಲೇಸೆತದ ದೂರದಲ್ಲಿ ನಮ್ಮ ಬಾಲವಾಡಿ ಇತ್ತು. ಹೀಗಾಗಿ ಸೈಕಲ್ ಮೇಲೆ ಹೋಗುವ ಅವಕಾಶ ಕೂಡಿ ಬರಲೇ ಇಲ್ಲಾ. ಅಷ್ಟೊತ್ತಿಗಾಗಲೇ ನನ್ನ ತಂಗಿ ಪುಟ್ಟ ಹೆಜ್ಜೆ ಇಡುತ್ತ ನಾನೆಲ್ಲಿ ಹೋದರೂ ಬಾಲಂಗೊಸಿಯಂತೆ ಬರುತಿದ್ದಳು, ಹೀಗಾಗಿ ನಮ್ಮ ತಂದೆ ನನ್ನ ತಂಗಿಯನ್ನು ಪುಟ್ಟ ಸೀಟಿನಲ್ಲಿ ಮತ್ತೆ ನನ್ನನ್ನು ದೊಡ್ಡ ಸೀಟಿನ ಮೇಲೆ ಕೂಡಿಸಿ ಸೈಕಲ್ ನಡೆಸಿಕೊಂಡು ಹೋಗುತ್ತಿದ್ದರು.

ನಾನು ಮೊದಲನೇ ಇಯುತ್ತೆ ಸೇರಿದಾಗ ಸ್ವಲ್ಪ ದಿನ ಮತ್ತೆ ಸೈಕಲ್ ಸವಾರಿ ಭಾಗ್ಯ ಸಿಕ್ಕಿತು ಆದ್ರೆ ನಂತರದ ದಿನಗಳಲ್ಲಿ ಟ್ರೈನಿಂಗ್, ಡೆಪ್ಯೂಟೇಷನ್, ಮಾರ್ನಿಂಗ್ ಶಿಫ್ಟ್ ಅಂತೆಲ್ಲ ನಮ್ಮ ತಂದೆಗೆ ಸಮಯ ಸಿಕ್ಕಿರ್ಲಿಲ್ಲ. ನಾವು ದೊಡ್ಡವರಾದಂತೆ ಶಾಲೆಗಳು ದೂರವಾಗುತ್ತಾ ಹೋದವು, ಬಸ್ಸನ್ನೇ ನಂಬಬೇಕಾಯಿತು.


ಕಾಲನ ಹೊಡೆತಕ್ಕೆ ಸಿಕ್ಕು ಸೈಕಲ್ಲಿನ ಪುಟ್ಟ ಸೀಟನ ಸ್ಪಂಜು ಕಿತ್ತಿ, ಗಂಟೆ ತುಕ್ಕು ಹಿಡಿದಿತ್ತು. ನಾನು ಸೈಕಲ್ ಸವಾರಿಯಿಂದ ದೂರ ಬಲು ದೂರ ಸಾಗುತ್ತ ಹೋದೆ. ನಮ್ಮ ತಂದೆಯ ಅಕ್ಕರೆ ಎಂಬ ಸಕ್ಕರೆ ಕರಗಿ ಶಿಸ್ತು ಎಂಬ ಹಾಲಿನಲ್ಲಿ ವಿಲೀನವಾಗಿತ್ತು. ಈ ಪ್ರೀತಿಯ ಸೈಕಲ್ಲಿನ ಅವನತಿಗೆ ಕಾರಣೀಭೂತನು ನಾನೇ ಅನ್ನುವದು ಒಂದು ವಿಪರ್ಯಾಸದ ಸಂಗತಿ. ನಾನು ಹೈಸ್ಕೂಲಿಗೆ ಬರುವಷ್ಟೊತ್ತಿಗೆ ನಾವು ದೂರದ ಬಡಾವಣೆಗೆ ಶಿಫ್ಟ್ ಆಗಿದ್ವಿ. ಅಲ್ಲಿಂದ ನಮ್ಮ ತಂದೆಯ ಆಫೀಸ್ ದೂರವಾಗಿದ್ದರಿಂದ ಅವರು ಬಸ್ಸಿಗೆ ಹೋಗುತ್ತಿದ್ದರು ಮತ್ತೆ ಮೇಲಿಂದ ಮೇಲೆ ಡೆಪ್ಯೂಟೇಷನ್ ಅಂತ ಬೇರೆ ಊರಿಗೆ ಹೂಗಬೇಕಾಗ್ತಿತ್ತು. ಹೀಗಾಗಿ ಸೈಕಲ್ ಬಳಿಕೆ ಇಲ್ಲದೆ ಮೂಲೆಗುಂಪಾಗಿತ್ತು. ಹತ್ತಿರದಲ್ಲಿ ಯಾವ ರಿಪೇರಿ ಅಂಗಡಿಗಳಿರಲಿಲ್ಲ. ನಾನು ನನ್ನ ಒಬ್ಬ ಮಿತ್ರಶಿಖಾಮಣಿಯ ಸಲಹೆಯ ಮೇರೆಗೆ ಆ ಸೈಕಲ್ಲಿನ ಜೀರ್ಣೋದ್ಧಾರ ಪ್ರಕ್ರಿಯೆಯನ್ನು ಕೈಗೆತ್ತುಕೊಂಡೆ, ಪಾನಾ, ಪಕ್ಕಡಗಳನ್ನು ತರಿಸಿ ಬಿಡಿಭಾಗಗಳನ್ನು ಬಿಚ್ಚಿದೆವು, ಆದ್ರೆ ಮತ್ತೆ ಜೋಡಿಸೋಕ್ಕೆ ಬರಲಿಲ್ಲ, ಅರ್ಧಂಬರ್ಧ ಆಪರೇಷನ್ ಮಾಡಿ ಮಾಳಿಗೆಯ ಮೇಲೆ ಎಸೆದುಬಿಟ್ಟೆ. ನಮ್ಮ ತಂದೆ ಊರಿಂದ ಬಂದಮೇಲೆ ಸೈಕಲ್ ದುರಾವಸ್ಥೆ ನೋಡಿ ಎಷ್ಟು ಮರುಗಿದರೋ ಏನೋ. ಇಪ್ಪತ್ತು ವರ್ಷ ಸೇವೆಗೈದ ಹಟ್ಟಾ-ಕಟ್ಟಾ ಸೈಕಲ್ ಈಗ ಮುರಿದು-ಮೂರಾ ಬಟ್ಟೆಯಾಗಿತ್ತು. ಸಾಮಾನ್ಯವಾಗಿ ಸಿಟ್ಟಿನ ಸ್ವಭಾವದ ಅಪ್ಪ ಅವತ್ತೇನೂ ಪಿಟ್ ಎಂದು ಬೈಯಲಿಲ್ಲ, ಫಟ್ ಎಂದು ಹೊಡೆಯಲಿಲ್ಲ. ಸ್ವಲ್ಪ ದಿನಗಳಲ್ಲಿ ಯಾರೋ ಮಿತ್ರರಿಂದ ಒಂದು ಹಳೆಯ ಲೇಡೀಸ್ ಸೈಕಲ್ ತಂದು ಕೊಟ್ಟರು.

ನೋಡು ನೋಡುತ್ತಾ ನಾನು ದೊಡ್ಡವನಾದೆ. ನನ್ನ ತಂದೆಯ ಎತ್ತರಕ್ಕೆ ಬೆಳೆದೆ, ಅಷ್ಟೇ ಅಲ್ಲ ಅವರಿಗೇ ಪಾಠ ಹೇಳುವಷ್ಟ ಬೆಳೆದೆ....ಇಲ್ಲಾ...ಸ್ವಲ್ಪ ತಮಾಷೆ ಮಾಡಿದೆ..ಆದರೂ ನಿಜ. ನನ್ನ ತಂದೆ ಹಿರಿಯರು ಯಾವಾಗಲೂ ನಾನು ಅವರಿಂದ ಕಲಿತಿದ್ದೇನೆ ಮತ್ತು ಕಲಿಯುತ್ತಲೇ ಇದ್ದೇನೆ. ಆದರೆ ತಮಾಷೆ ಏನಂದರೆ ನಮಗೆ ಕೂಡಿಸುವ, ಕಳೆಯುವ ಲೆಕ್ಕಾ ಹೇಳಿದ ನನ್ನ ತಂದೆಗೆ ನಾನು ಟ್ರಿಗ್ನೋಮೆಟ್ರಿ ಮತ್ತು ಕ್ಯಾಲ್ಕುಲಸ್ ಹೇಳಿಕೊಟ್ಟೆ. ನಾನು ಇಂಜಿನಿಯರಿಂಗ್ ಓದುತ್ತಿದ್ದಾಗ ಅವರು ದೂರಸಂಪರ್ಕ ಇಲಾಖೆಯ ಡಿಪಾರ್ಟ್ಮೆಂಟ್ ಎಕ್ಸಾಮ್ ತಯ್ಯಾರಿ ನಡೆಸಿದ್ದರು, ನಾನು ಅವ್ರಿಗೆ ಕೆಲ ಲೆಕ್ಕಾ ಬಿಡಿಸಲು ಸಹಾಯಮಾಡುತ್ತಿದೆ.

ಅಪ್ಪನಾಗಿ :

ಮಹಾನಗರಗಳನ್ನು ಸೇರಿ, ಬಿಡುವಿಲ್ಲದ ಯಾಂತ್ರಿಕ ಜೀವ ಜಂಜಾಟಕ್ಕೆ ಸಿಲುಕಿದ ನಾನು, ನಮ್ಮ ತಂದೆ ನಮಗೆ ನೀಡಿದಷ್ಟು ಸಮಯವನ್ನು ನಮ್ಮ ಮಕ್ಕಳಿಗೆ ಕೊಡಲು ಸಾಧ್ಯವಾಗದೆ ಇರಬಹುದು, ಆದರೆ ಪ್ರೀತಿ ಮತ್ತು ಸಂತೋಷ ನೀಡಲು ಸಕಲ ಯತ್ನ ಮಾಡಿರುವೆ. ಅಪ್ಪನ ಥರಾ ಪುಟ್ಟ ಸೀಟ್ ಕುದ್ರಿಸಿ ನಿಧಾನವಾಗಿ ಸೈಕಲ್ ತುಳಿಯುತ್ತ "ದ.. ರ. ನ.. ನ.." ಎಂದು ಹಾಡುತ್ತ, ಶಾಂತ ಬೀದಿಗಳಲ್ಲಿ ಸುತ್ತಾಡಿಸದೇ ಹೋದರೂ, ಬೈಕಿನ್ ಪೆಟ್ರೋಲ್ ಟ್ಯಾಂಕ್ ಮೇಲೆ ಕುದ್ರಿಸಿ, ಭರ್.. ಎಂದು ಓಡಿಸಿ ನನ್ನ ಮಗಳಿಗೆ ಥ್ರಿಲ್ ಬರುವ ಹಾಗೆ ಮಾಡ್ತಿದ್ದೆ. ಜಮಾನಾ ಬದಲಾದಂತೆ ಸಂತೋಷ ಕೊಡುವ ಸಾಧನ ಮತ್ತು ಅಳತೆಗೋಲು ಬದಲಾಗಿತ್ತು.

ನನ್ನ ಮಗಳು 4 ನೆ ಕ್ಲಾಸ್ ಬಂದಾಗ ನಾನು ಒಂದು ಸೈಕಲ್ ಕೊಡಿಸಿದ್ದೆ. ಮೊದಮೊದಲು ಹುರುಪಿನಿಂದ ಸೈಕಲ್ ಓಡಿಸುತ್ತಿದ್ದಳು ನಂತರ 3-4 ವರ್ಷಗಳಲ್ಲಿ ಮೂಲೆಗುಂಪಾಯಿತು, ರಿಪೇರಿ ಮಾಡಿಸಲು ಮುಂದಾದೆ, ಆದ್ರೆ ಅವ್ಳು ಈಗಿನ ಟೀನ್ಏಜ್ ಟ್ರೆಂಡ್ ಅಂತ ಗೇರ್ ಸೈಕಲ್ ಬೇಕೆಂದು ಹಠ ಹಿಡಿದಳು. ನಾನು, "ಈಗಿನ ಹುಡುಗುರಿಗೆಲ್ಲಾ ರೊಕ್ಕದ ಕಿಮ್ಮತ್ತು ಗೊತ್ತಾಗಂಗಿಲ್ಲ" ಅಂತೆಲ್ಲ ಗೊಣಗುತ್ತಿದ್ದೆ. ಆಗ ನಾನು ಚಿಕ್ಕವನಿದ್ದಾಗ ಮಾಡಿದ ಮಹಾಕರ್ಯ ನನಪಾಯಿತು, ನಾನು ಸೈಕಲ್ ಕೆಡೆಸಿದಾಗ ನಮ್ಮ ತಂದೆ ತುಟಿ ಪಿಟಕ್ ಎಂದಿರಲಿಲ್ಲ ಅದು ನೆನಪಾಗಿ ಮಗಳ ಇಂಗಿತಕ್ಕೆ ತಥಾಸ್ತು ಎಂದಿದ್ದೆ. ಸಂಸ್ಕಾರದ ಬೀಜ ಬಿತ್ತಿ, ಶಿಕ್ಷಣದ ನೀರು ಎರೆದು, ಶಿಸ್ತಿನ ಗೊಬ್ಬರ ಹಾಕಿ ಸುಫಲಾ ವಂಶವೃಕ್ಷವಾಗಿ ನಮ್ಮನ್ನು ಬೆಳೆಸಿದ ನಮ್ಮ ತಂದೆಗೆ ನಾನೆಂದೂ ಚಿರ ಋಣಿ. ನಾನೂ ಒಬ್ಬ ಅಪ್ಪನಾಗಿ ಇದೇ ಪರಂಪರೆ ಮುಂದುವರೆಸುವ ವಿಶ್ವಾಸವಿದೆ.



## ಜಗದ ಸಂತೆ

ಎತ್ತ ತಿರುಗಿದರತ್ತ ಕಿಕ್ಕಿರಿದಿವೆ ಅಂಗಡಿಗಳು
ಸುತ್ತ ರಸ್ತೆಗಳಲಿ ಜನರೆಲ್ಲ ನೂಕುನುಗ್ಗಲು
ಸಾಲು ಸಾಲು ಸರದಿ ನಿಂತಂತೆ ವಾಹನಗಳು
ಧಾವಂತದಿ ನಡೆವ ನಗೆಯಿರದ ಮುಖಗಳು

ಫಲಕವಿದೆ ಮುಖವಾಡಗಳು ಖರೀದಿಗಿವೆ
ಬಲ ಎಡದಿ ಕೈಬೀಸಿ ನಗುತಲಿ ಕರೆಯುತಿವೆ
ಸೆಳೆಯುತ ಆಕರ್ಷಣೆ ಜಾಲವ ಬೀಸುತಿವೆ
ಕೆಲ ಸಮಯ ಮೈಮರೆವಂತೆ ಮಾಡುತಿವೆ

ಹುಡುಗಾಟದ ಕಾಲದಿ ಭಾವದ ಅರಿವಿಲ್ಲ
ಹುಡುಕಾಟದ ತವಕ ಕಳೆದದ್ದು ನೆನಪಿಲ್ಲ
ಸಿಡಿಲು ಗುಡುಗಿನನುಕರಣೆ ಮಳೆಯಿಲ್ಲ
ಗಡಿಬಿಡಿ ಕೊಡುಕೊಳ್ಳುವಿಕೆ ಸಾರವಿಲ್ಲ

ಆಸೆಯ ಗಾಳಿ ಮನದಲಿ ಸುಳಿದಾಡುತಿದೆ
ಆಯ್ಕೆ ಒಮ್ಮತವಿಲ್ಲ ಜೀವ ತುಸು ಸೋತಿದೆ
ಅಂತರಂಗಕೆ ಆಕಾರ ಹೊಂದಿಕೆಯಾಗದಿದೆ
ಹಿಂತಿರುಗುವ ಸಮಯ ಸಮೀಪ ಬರುತಿದೆ

ಎಲ್ಲವೂ ಖಾಲಿ ಮಾರಾಟ ಬರಿದಾಯ್ತು
ವ್ಯಾಪಾರಿ ಮತ್ತೆ ಸರಕಿಗೆ ಹೊರಟಾಯ್ತು
ಮುಖವಾಡವಿರದ ಬಾಳು ಗೋಜಲಾಯ್ತು
ಮರಳಿದೆ ಪೆಚ್ಚಾಗಿ ನನ್ನದೇ ಮುಖ ಹೊತ್ತು

- **ರತ್ನಾ ಬಡವನಹಳ್ಳಿ**

# ಮುಂದಿನ ಸಂಚಿಕೆಯಲ್ಲಿ............

ಕಂಪುವಿನ ಐದನೆಯ ಸಂಚಿಕೆಯ ಜೊತೆಗೆ ಈ ತಿಂಗಳು, ಕಂಪು Android app, Website ಕೂಡ ಹೊರತರಲಾಯಿತು. ಇವೆಲ್ಲದರ ಮಧ್ಯೆಯೂ ಸಕಾಲಕ್ಕೆ ಕಂಪು ಪತ್ರಿಕೆ ತರುತ್ತಿದ್ದೇವೆ.

ಹಬ್ಬಗಳ ವಿಷಯ ವಿಶೇಷವಾಗಿ ಈ ಸಂಚಿಕೆ ಬಂದಿದೆ. ಹಬ್ಬಗಳನ್ನು ಆಚರಿಸುತ್ತಾ ಸಂಚಿಕೆಯ ಸವಿ ಸ್ವೀಕರಿಸುವಿರೆಂದು ನಂಬಿಕೆ. ಸಂಚಿಕೆಯನ್ನು ತಮಗೆ ತಿಳಿದ ಕನ್ನಡಿಗರಿಗೆಲ್ಲಾ ಹಂಚಲು ಕಳಕಳಿಯ ಮನವಿ.

ಈ ಸಂಚಿಕೆಯಲ್ಲಿ ಸಮಯದ ಅಭಾವದಿಂದ ಪುಣೆ ಮತ್ತು ಪುಣೆಯೇತರ ಕನ್ನಡಿಗರ ಸಾಧನೆಗಳನ್ನು ಹಂಚಿಕೊಳ್ಳುವ ಅಂಕಣ ತರಲಾಗಲಿಲ್ಲ. ಮುಂದಿನ ಸಂಚಿಕೆಯಿಂದ ತರಲಿದ್ದೇವೆ. ನಮ್ಮೊಡನೆ ಪತ್ರಿಕಾ ಪ್ರಕಟಣೆಗೆ ಸಹಾಯ ಮಾಡಲು ವಿದ್ಯಾರ್ಥಿಗಳಿಗೆ, ಗೃಹಿಣಿಯರಿಗೆ, ಹಿರಿಯರಿಗೆ, ಹಾಗೂ ಯುವಕ-ಯುವತಿಯರಿಗೆ ಮನವಿ. ಇಚ್ಛೆಯಿದ್ದವರು ನಮ್ಮನ್ನು ಸಂಪರ್ಕಿಸಿ.

ಮುಂದಿನ ತಿಂಗಳು ನಮ್ಮ ಸಂಸ್ಕೃತಿ, ಸಂಸ್ಕಾರ, ಮಕ್ಕಳ ಪಾಲನೆಯನ್ನು ವಿಷಯವಾಗಿಟ್ಟುಕೊಂಡು ಲೇಖನ, ಕತೆ, ಕವನಗಳನ್ನು ತರುವ ಬಯಕೆ. ನಿಮ್ಮ ಕೃತಿಗಳನ್ನು email ಮುಖಾಂತರ ಕಳಿಸಿದರೆ ಒಳ್ಳೆಯದು.

ಕಂಪಿನ ವ್ಯಾಪ್ತಿ ಹರಡಲು ನಿಮ್ಮ ಸಹಕಾರ ಬೇಕು. ನಿಮ್ಮ ಸಾಮಾಜಿಕ ಮಾಧ್ಯಮಗಳಲ್ಲಿ, WhatsApp Status (Updates) ನಲ್ಲಿ ಇದನ್ನು ಬಿತ್ತರಿಸಿ. ಹೆಚ್ಚಿನ ಜನರಿಗೆ ಇದನ್ನು ತಲುಪಿಸಲು ನಮ್ಮ ಮನವಿ. ಪ್ರತಿಯೊಬ್ಬರು ಹತ್ತು ಹೊಸ ಓದುಗರಿಗೆ ಕಳುಹಿಸಿದರೆ, ಕಂಪು ಬೆಳದೀತು.

ಬಾರಿಸು ಕನ್ನಡ ಡಿಂಡಿಮವ..................

# ತಿಂಗಳ ಛಾಯಾ ಫಲಕ












## ಬರುವ ತಿಂಗಳ ಕಾರ್ಯಕ್ರಮ

# ಕನ್ನಡ ಸಂಗೀತ ಕೂಟ, ಪುಣೆ

**ಕನ್ನಡ ಸಂಘ ಪುಣೆಯ ಸಹಯೋಗದಿಂದ**

*ಪ್ರಸ್ತುತ ಪಡಿಸುವ*

ಕನ್ನಡ ಸುಮಧುರ ಗೀತೆಗಳ ಪುಷ್ಪಮಾಲೆ

## ಹಚ್ಚೇವು ಕನ್ನಡದ ದೀಪ

ರವಿವಾರ, ದಿ. 29 ಸೆಪ್ಟೆಂಬರ್, ಸಂಜೆ 5 ಗಂಟೆಗೆ

For Tickets, Contact: +91 81492 04599